**OS.No.14/2019**
**P.W-1**

**( ದಿನಾಂಕ.16-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ ಶ್ರೀ. A.G.P ರವರಿಂದ**

ಸಾಕ್ಷಿಗೆ ನಿಪಿ-13 ನ್ನು ತೋರಿಸುತ್ತಿದ್ದು, ಅದರಲ್ಲಿ ಸರ್ವೇ ನಂಬರ. 2 ರ ಜಮೀನನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಾವು 1973-74 ರ ಆಚೆಗಿನ ಪಹಣಿಗಳನ್ನು ಸಲ್ಲಿಸಿದ್ದು ಅದಕ್ಕಿಂತ ಪೂರ್ವದ ಪಹಣಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. 1973-74 ರ ಮುಂಚೆ ಇರುವ ಪಹಣಿಗಳನ್ನು ನಾನು ನೋಡಿರುತ್ತೇನೆ ಆದರೆ ಅವುಗಳು ಸಿಕ್ಕಿಲ್ಲ. ನಾನು ಸದರಿ ಪಹಣಿಗಳ ಸಲುವಾಗಿ ಸಂಬಂಧಪಟ್ಟ ಇಲಾಖೆಗೆ ನೀಡಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇದೆಯಾ ಎನ್ನುವ ಪ್ರಶ್ನೆಗೆ ನಾನು ಅರ್ಜಿ ಕೊಟ್ಟಿಲ್ಲ ಬಾಯಿಮಾತಿನಿಂದ ಕೇಳಿರುತ್ತೇನೆ ಅವರು ಇಲ್ಲ ಎಂದು ಹೇಳಿರುತ್ತೆರೆ ಎಂದು ನುಡಿಯುತ್ತಾರೆ.

ಸರ್ವೇ ನಂಬರ 2 ರ ಪಹಣಿಯಲ್ಲಿ 1963-64 ರಿಂದ ಸರಕಾರಿ ದೇವಲು ಎಂದು ಮರಾಠಿಯಲ್ಲಿ ಬರೆದಿದ್ದಾರೆ ಎಂದರೆ ಸರಿ. 1973-74 ರ ಪೂರ್ವದಲ್ಲಿ ಸರಕಾರ ಪಹಣಿಯಲ್ಲಿ ಸದರಿ ಸರ್ವೇ ನಂಬರದಲ್ಲಿ ಬೀರ ದೇವರು ಸರಕಾರಿ ದೇವಲು ಎಂದು ಬರೆದಿಲ್ಲ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-5.pdf

ದಾವಾ ಸ್ವತ್ತಿನ ಸರ್ವೆ ನಂಬರ 2 ರಲ್ಲಿ ಗ್ರಾಮ ಪಂಚಾಯತಿ ಕಟ್ಟಡ ಇರುತ್ತದೆ ಎಂದರೆ ಸರಿ. ಅದೇ ರೀತಿ ಅಂಗನವಾಡಿ ಕಟ್ಟಡ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಒಂದು ಕೊಳವೆ ಬಾವಿ (ಕೈಪಂಪುವುಳ್ಳ) ಇರುತ್ತವೆ ಎಂದರೆ ಸರಿ. ಅಲ್ಲದೆ ಇಸ್ಮಾಯಿಲ ಖಾದ್ರಿ ದರ್ಗಾ ಹಾಗೂ ಯಲ್ಲಾಲಿಂಗ ದೇವರ ಗುಡಿ ಇದೆ ಎಂದರೆ ಸರಿ. ಸರ್ವೇ ನಂಬರ 2 ರಲ್ಲಿ ಸರಕಾರಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಉತ್ತರ-ದಕ್ಷಿಣವಾಗಿರುತ್ತದೆ. ಸದರಿ ರಸ್ತೆ ಅಗಲು 20 ಅಡಿ ಇದ್ದು ಉದ್ದ 300 ಅಡಿ ಸಿಮೆಂಟ ರಸ್ತೆ ಇರುತ್ತದೆ.

ದಾವಾ ಸರ್ವೇ ನಂಬರ 2 ರ ಬೀರ ದೇವರು ಪಟ್ಟೆದಾರರಿಗೆ ಕೊಟ್ಟಿಲ್ಲ, ಅದು ಸಂಪೂರ್ಣವಾಗಿ ಸರಕಾರಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸರಕಾರದ ಜಮೀನನ್ನು ಕಬಳಿಸುವ ಉದ್ದೇಶದಿಂದ ಬೀರ ದೇವರ ಪಟ್ಟೆದಾರ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ 2 ನ್ನು ಬೀರ ದೇವರ ಪಟ್ಟೆದಾರರಿಗೆ ನೀಡಿರುತ್ತಾರೆ ಎಂದು ತೋರಿಸಲು ನಾನು ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ಆದರೆ ಯಾವುದೆ ಸರಕಾರಿ ಮಂಜೂರಾದ ಬಗ್ಗೆ ದಾಖಲೆ ಇರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-5.pdf

www.ecourtsindia.com



**P.W-1**

ದಾವಾ ಸ್ವತ್ತಿನ ಸರ್ವೇ ನಂಬರ 2 ಕಚ್ಚಾ ಭೂಮಿ ಇರುತ್ತದೆ, ಅಂದರೆ ಬೀಳು ಭೂಮಿ ಇರುತ್ತದೆ. ಅದರಲ್ಲಿ ಕಟ್ಟಡ ಇರುತ್ತದೆ. ಸಾಗುವಳಿ ಭೂಮಿ ಇರುವುದಿಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ 2 ರಲ್ಲಿರುವ ಸರಕಾರಿ ಶಾಲೆ ಕಟ್ಟಡ ಕಟ್ಟಲು ನಾವು ಅನುಮತಿ ಕೊಟ್ಟಿಲ್ಲ. ದಾವಾ ವಾದಪತ್ರದೊಂದಿಗೆ ಹಾಜರುಪಡಿಸಿದ ನಕಾಶೆಯಲ್ಲಿ ಕೆಂಪು ಬಣ್ಣದಿಂದ ತೋರಿಸಿದ BC ರಸ್ತೆ ಮೊದಲಿನಿಂದಲೂ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಸರಕಾರಿ ಭೂಮಿ ಇದ್ದು, ಯಾವತ್ತು ಕುರುಬ ಸಮಾಜದ ಸ್ವಾಧೀನದಲ್ಲಿ ಮತ್ತು ಮಾಲೀಕತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 3 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ಪೋಲಿಸರ ಸಹಾಯದೊಂದಿಗೆ BC ರಸ್ತೆಯನ್ನು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತಿನಲ್ಲಿರುವ BC ರಸ್ತೆಯನ್ನು ಅಭಿವೃದ್ದಿ ಪಡಿಸುವ ಸಲುವಾಗಿ ಪ್ರತಿವಾದಿಗಳು ಕಾನೂನು ಕ್ರಮ ಕೈಗೊಂಡರು ಕೂಡಾ ನಾವು ಉದ್ದೇಶಪೂರ್ವಕವಾಗಿ ಕಾಮಗಾರಿ ತಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-5.pdf

**P.W-1**

ನಾನು ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳ ವಿರುದ್ದ ಸುಳ್ಳು ಆಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸರಕಾರಿ ಭೂಮಿಯಾಗಿರುವುದರಿಂದ ಅದನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-5.pdf

www.ecourtsindia.com